






**ಚಟುವಟಿಕೆ- 8 ಮನೆಯೊಳಗಿನ (ಗೃಹಪಯೋಗಿ) ವಸ್ತುಗಳನ್ನು ಸಂಯೋಜಿಸಿ ಚಿತ್ರಿಸುವುದು.**

**ವಯಸ್ಸು:** 6 ವರ್ಷ ಮೆಲ್ಪಟ್ಟವರು

**ವಸ್ತುಗಳು:** ಗೃಹಬಳಕೆ ವಸ್ತುಗಳು, ಅಂದರೆ

ಕುರ್ಚಿಗಳು, ಟೇಬಲ್‌ಗಳು, ಹಾಸಿಗೆ, ಅಲ್ಮೇರಾ, ಫ್ಯಾನ್, ಪಾತ್ರೆಗಳು,ಕಟ್ಟಿಗೆಗಳು, ಲೋಹಗಳು, ಪೊರಕೆ, ಇತ್ಯಾದಿ.

**ಹಂತ 1: ನೀವು ಸಂಯೋಜಿಸಲು ಬಯಸುವ ಗೃಹಬಳಕೆ ವಸ್ತುಗಳನ್ನು ನಿಮ್ಮ ಮನೆಯ ಸುತ್ತಲೂ ಸೂಕ್ಷ್ಮವಾಗಿ ಗಮನಿಸಿ,ಹುಡುಕಿ ಅದರಿಂದ ವಿಶೇಷ ಶಕ್ತಿಯುಳ್ಳ ಹೊಸ ವಸ್ತುವನ್ನು ರಚಿಸಿ.**

**ನೆನಪಿನಲ್ಲಿಡಬೇಕಾದ ಅಂಶಗಳು:**

1. ನಿಮ್ಮೊಂದಿಗೆ ಕೆಲಸ ಮಾಡಲು ಅಥವಾ ಕುಟುಂಬದ ಸದಸ್ಯರು ಅಥವಾ ಸ್ನೇಹಿತರನ್ನು ಹುಡುಕಿ.
2. ಅವರಿಗೂ ಸಹ ಅದೇ ಚಟುವಟಿಕೆಯನ್ನು ಪ್ರತ್ಯೇಕವಾಗಿ ಮಾಡಲು ಹೇಳಿ.
3. ನಿಮ್ಮ ಮನೆಯ ಸುತ್ತಲೂ ನೀವು ಹೊಸದಾಗಿ ಸಂಯೋಜಿಸಲು ಬಯಸುವ ಸರಳ ವಸ್ತುಗಳಿವೆಯೇ ಎಂದು ನೋಡಿ.

4. ಈ ಹೊಸ ವಸ್ತುವಿಗೆ ನೀವು ಯಾವ ರೀತಿಯ ವಿಶೇಷ ಶಕ್ತಿಯನ್ನು ನೀಡಲು ಬಯಸುತ್ತೀರಿ ಎಂದು ಯೋಚಿಸಿ? ಹಾಗೂ ನೀವು ನೀಡುತ್ತಿರುವ ವಿಶೇಷ ಶಕ್ತಿ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಹಾಗೂ ನಿಮ್ಮ ಸಮುದಾಯಕ್ಕೆ ಹೇಗೆ ಸಹಾಯವಾಗಬಹುದು.
5. ವಿವಿಧ ರೀತಿಯ ವಸ್ತುಗಳನ್ನು ಸಂಯೋಜಿಸಲು ಪ್ರಯತ್ನಿಸಿ ಮತ್ತು ಅದು ಹೇಗಿರಬಹುದು ಮತ್ತು ಅದು ಯಾವ ಶಕ್ತಿಯನ್ನು ಹೊಂದಿರಬಹುದು ಎಂಬುದನ್ನು ಗಮನಿಸಿ. ನೀವು ಯಾವ ವಸ್ತುಗಳನ್ನು ಸಂಯೋಜಿಸಲು ಬಯಸುತ್ತೀರಿ ಎಂಬುದನ್ನು ನಿರ್ಧರಿಸಿದ ನಂತರ ವಸ್ತುಗಳ್ನು ಗಮನಿಸಿ ಸಂಯೋಜಿತ ವಸ್ತುವಿನ ಆಕಾರಗಳು ಮತ್ತು ವಿವರಗಳನ್ನು ಸ್ಕೆಚ್ ಮಾಡಿ.
6. ಸಂಯೋಜಿತ ವಸ್ತುವನ್ನು ಚಿತ್ರಿಸಿದ ನಂತರ ಅದಕ್ಕೆ ಒಂದು ಹೆಸರನ್ನು ನೀಡಿ ಮತ್ತು ಅದರ ವಿಶೇಷ ಶಕ್ತಿಯನ್ನು ವಿವರಿಸಿ.

## ನಿಮ್ಮ ಪಾಲುದಾರರೊಂದಿಗೆ ಪರಿಗಣಿಸಬೇಕಾದ ಅಂಶಗಳು

1. ಇಬ್ಬರ ಸಂಯೋಜಿತ ಚಿತ್ರವನ್ನು ಮುಗಿಸಿದ ನಂತರ ರಚಿಸಿದ ಚಿತ್ರವನ್ನು ಪರಸ್ಪರ ತೋರಿಸಿ.
2. ಯಾವುದಾದರೂ ವಿವರಗಳನ್ನು ಸೇರಿಸಲು ಬಯಸಿದ್ದಲ್ಲಿ ಪರಸ್ಪರ ಸಕಾರಾತ್ಮಕವಾಗಿ ಹಂಚಿಕೊಳ್ಳಿ ಮತ್ತು ಅವರು ನೀಡಿದ ಸಲಹೆಗಳ ಸಹಾಯದಿಂದ ನಿಮ್ಮ ಚಿತ್ರವನ್ನು ಮತ್ತು ಕಥೆಯನ್ನು ಪೂರ್ಣಗೊಳಿಸಿ.

ART SPARKS
CURIOSITY. CREATIVITY. LEARNING.

**ಆರ್ಟ್ ಸ್ಪಾರ್ಕ್ಸ್ ಫೌಂಡೇಶನ್**

www.art-sparks.org